## ಸುತ್ತೂರು ಶ್ರೀಕ್ಷೇತ್ರ

ಪ್ರಸಿದ್ಧ ಸುತ್ತೂರು ಶ್ರೀಕ್ಷೇತ್ರ ಮೈಸೂರಿನಿಂದ 25 ಕಿ.ಮೀ. (ವರುಣಾ–ಹೊಸಕೋಟೆ ಮಾರ್ಗ) ದೂರದಲ್ಲಿದೆ. ಸಾವಿರ ವರ್ಷಗಳ ಹಿಂದೆ ಸ್ಥಾಪಿತವಾದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ತನ್ನದೇ ಆದ ಅನನ್ಯ ಐತಿಹಾಸಿಕ ಹಿನ್ನೆಲೆ ಹೊಂದಿದೆ. ತನ್ನ ಬಹುಮುಖ ಸೇವೆಯನ್ನು ಅನೇಕ ರಾಜ್ಯಗಳಲ್ಲಿ ವಿಸ್ತರಿಸಿದೆ. ಸಾಮಾಜಿಕ ಮುನ್ನಡೆಗಾಗಿ ವಿಶಿಷ್ಟ ಕೊಡುಗೆಗಳನ್ನು ನೀಡುತ್ತಿದೆ. ಶ್ರೀಮಠದ ವತಿಯಿಂದ ಕೈಗೊಳ್ಳಲಾಗುವ ಎಲ್ಲಾ ಕಾರ್ಯಕ್ರಮಗಳು ಸರ್ವರಿಗೂ ಮುಕ್ತವಾಗಿವೆ.

ಕಪಿಲಾ ನದಿ ತೀರದ ಹಚ್ಚಹಸಿರಾದ ನಿರ್ಮಲ ವಾತಾವರಣದಲ್ಲಿ ಸುತ್ತೂರು ಶ್ರೀಕ್ಷೇತ್ರ ವಿರಾಜಮಾನವಾಗಿದೆ. ಧರ್ಮಗುರುಗಳನ್ನು, ಗಣ್ಯಾತಿಗಣ್ಯರನ್ನು ಮತ್ತು ಭಕ್ತಾದಿಗಳನ್ನು ತನ್ನತ್ತ ಸೆಳೆಯುವ ಅತಿಶಯತೆಯನ್ನು ಹೊಂದಿದೆ. ನಿರ್ಮಲವಾದ ಪರಿಸರದಲ್ಲಿ ಅತ್ಯಂತ ಸುಸಜ್ಜಿತವಾದ ಭವ್ಯ ಕಟ್ಟಡಗಳಲ್ಲಿ ಶಾಲೆ, ವಿದ್ಯಾರ್ಥಿನಿಲಯ, ಶಿಕ್ಷಣ ಮಹಾವಿದ್ಯಾಲಯ, ಸಂಸ್ಕೃತ ಕಾಲೇಜು, ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ ಮಾತ್ರವಲ್ಲದೆ ವೃದ್ಧಾಶ್ರಮಗಳು, ಕೃಷಿ ವಿಜ್ಞಾನ ಕೇಂದ್ರ, ವಸ್ತುಸಂಗ್ರಹಾಲಯ ಮುಂತಾದವು ಎಲ್ಲಾ ವರ್ಗಗಳ ಜನರಲ್ಲಿ ಸದಾ ಆತ್ಮವಿಶ್ವಾಸವನ್ನು ತುಂಬುತ್ತಿವೆ. ಶ್ರೀಕ್ಷೇತ್ರಕ್ಕೆ ಆಗಮಿಸುವ ವಿದ್ಯಾರ್ಥಿಗಳ ತಂದೆ–ತಾಯಿ/ಪೋಷಕರಿಗೆ ಪ್ರಸಾದ ಹಾಗೂ ವಾಸ್ತವ್ಯದ ವ್ಯವಸ್ಥೆ ಇರುತ್ತದೆ.

## ಜೆಎಸ್‌ಎಸ್ ಮಹಾವಿದ್ಯಾಪೀಠ

'ನಹಿ ಜ್ಞಾನೇನ ಸದೃಶಂ' ಎಂಬುದನ್ನು ಮನಗಂಡಿದ್ದ ಪ್ರಾತಃಸ್ಮರಣೀಯರಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸಿದರು. ಅದಕ್ಕೂ ಪೂರ್ವದಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಅಶನ–ವಸತಿ ಸೌಕರ್ಯಗಳನ್ನು ನೀಡುತ್ತಿದ್ದರು. ಕಳೆದ ಆರು ದಶಕಗಳಿಂದ ನಾಡಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈ ಸಂಸ್ಥೆಯು ವಿಶಿಷ್ಟ ಸೇವೆ ಸಲ್ಲಿಸುತ್ತಿದೆ. ಜಾತಿ–ಮತ–ಪಂಥಗಳ ಭೇದವಿಲ್ಲದೆ ಸರ್ವರಿಗೂ ಸಮಾನ ಅವಕಾಶ ನೀಡುವ ವಿಶಾಲ ತಳಹದಿಯ ಮೇಲೆ ಸಾಕ್ಷರತೆಯ ಬೆಳಕನ್ನು ಎಲ್ಲೆಡೆ ಬೀರುತ್ತಿದೆ. ಮಹಾವಿದ್ಯಾಪೀಠದ ಆಶ್ರಯದಲ್ಲಿ ಶಿಶುವಿಹಾರದಿಂದ ಪ್ರಾರಂಭವಾಗಿ ಇಂಜಿನಿಯರಿಂಗ್, ಮೆಡಿಕಲ್, ಸ್ನಾತಕೋತ್ತರ ಶಿಕ್ಷಣದ ಜೊತೆಗೆ ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯಕ್ಕೆ ಸಂಬಂಧಿಸಿದಂತೆ 350 ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಕರ್ನಾಟಕ, ತಮಿಳುನಾಡು ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿಯೂ ಸಂಸ್ಥೆಯು ಸೇವಾನಿರತವಾಗಿದೆ. ಅಮೇರಿಕ, ದುಬೈ ಹಾಗೂ ಮಾರಿಷಸ್ ದೇಶಗಳಲ್ಲಿಯೂ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲ ಕಲ್ಪಿಸುತ್ತಿದೆ.

## ಜೆಎಸ್‌ಎಸ್ ವಸತಿ ಶಾಲೆ

ಇಂದು ನಮ್ಮ ನಡುವೆ ಪ್ರಾಥಮಿಕ–ಪ್ರೌಢ ಶಿಕ್ಷಣದಿಂದ ವಂಚಿತರಾದ ಅಸಂಖ್ಯಾತ ಮಕ್ಕಳಿದ್ದಾರೆ. ಇವರು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳಾಗಿರಬಹುದು ಅಥವಾ ನಿರ್ಗತಿಕರಾಗಿರಬಹುದು. ಒಟ್ಟಾರೆ ಇಂತಹ ನಿರಾಶ್ರಿತ ಮಕ್ಕಳಿಗಾಗಿ ಶಿಕ್ಷಣ ಹಾಗೂ ಅಶನ–ವಸತಿ ಸೌಲಭ್ಯವನ್ನು ಶ್ರೀಕ್ಷೇತ್ರದಲ್ಲಿ ಕಲ್ಪಿಸಲಾಗಿದೆ. ಸುಮಾರು 65 ಎಕರೆಯಷ್ಟು ವಿಸ್ತೀರ್ಣದಲ್ಲಿ ಭವ್ಯವಾದ ಶಾಲಾ ಕಟ್ಟಡದಲ್ಲಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆ ಇದೆ. ಇದಲ್ಲದೆ ಸಂಸ್ಕೃತ, ಸಂಗೀತ, ನೃತ್ಯ, ಚಿತ್ರಕಲೆ, ಪರಿಸರಪ್ರಜ್ಞೆ, ಜೀವನಮೌಲ್ಯಗಳು, ವ್ಯಕ್ತಿತ್ವ ವಿಕಾಸ, ಯೋಗ, ಮಲ್ಲಕಂಬ ಇತ್ಯಾದಿ. ದೇಸಿ ಆಟಗಳು, ಕ್ರೀಡೆ, ಎನ್.ಸಿ.ಸಿ., ಸ್ಕೌಟ್ಸ್/ಗೈಡ್ಸ್, ಬ್ಯಾಂಡ್, ಕೃಷಿ, ಕಂಪ್ಯೂಟರ್ ಶಿಕ್ಷಣ, ಕರಕುಶಲಕಲೆ ಹಾಗೂ ವೃತ್ತಿಪರ ತರಬೇತಿ ಮೊದಲಾದ ಹಲವಾರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಇಲ್ಲಿನ ಶಿಕ್ಷಣಕ್ರಮದಲ್ಲಿ ಒತ್ತು ನೀಡಲಾಗುತ್ತಿದೆ. ಪ್ರತಿ ವರ್ಷವೂ ಈ ಶಾಲೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡುತ್ತಿರುತ್ತಾರೆ.

## ಶೈಕ್ಷಣಿಕ ಸೌಲಭ್ಯಗಳು

- ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುವುದು.
- ಬೌದ್ಧಿಕ ವಿಕಾಸಕ್ಕಾಗಿ ರಾಷ್ಟ್ರೀಯ ಮತ್ತು ಅತಾರಾಷ್ಟ್ರೀಯ ಮಟ್ಟದ ಗಣ್ಯರುಗಳೊಂದಿಗೆ ಆಗಿಂದಾಗ್ಗೆ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.
- ಸುಸಜ್ಜಿತ ಗ್ರಂಥಾಲಯ, ಕಂಪ್ಯೂಟರ್ ಕೇಂದ್ರ ಹಾಗೂ ಇಂಟರ್‌ನೆಟ್ ವ್ಯವಸ್ಥೆ.
- ವಿಶಾಲವಾದ ಕ್ರೀಡಾಂಗಣ ಮತ್ತು ಮಲ್ಟಿಜಿಮ್ ವ್ಯವಸ್ಥೆ.
- ಆರೋಗ್ಯ ತಪಾಸಣೆಗಾಗಿ ಚಿಕಿತ್ಸಾ ಕೇಂದ್ರ, ದಂತ ಚಿಕಿತ್ಸಾಲಯ, ಆಯುರ್ವೇದ ಆಸ್ಪತ್ರೆ ಹಾಗೂ ಜೆಎಸ್‌ಎಸ್ ಆಸ್ಪತ್ರೆಯ ನುರಿತ ವೈದ್ಯರು ಮತ್ತು ಶುಶ್ರೂಷಕರಿಂದ ನಿರಂತರ ಸೇವೆ. ಸಾಮಾನ್ಯ ರೋಗಗಳಿಂದ ಬಳಲುತ್ತಿರುವ ಮಕ್ಕಳಿಗೆ ಅಗತ್ಯವಾದ ಔಷಧೋಪಚಾರ ಎಲ್ಲೆಡೆ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಪೋಷಕರು ಭರಿಸಬೇಕು.
- ಶಾಲಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಯಲು ಸಭಾಂಗಣ ವ್ಯವಸ್ಥೆ.
- ಮಕ್ಕಳ ಯೋಗಕ್ಷೇಮ ಮತ್ತು ಶೈಕ್ಷಣಿಕ ಮಾಹಿತಿಗಳಿಗೆ ಶಾಲೆಯ ಮುಖ್ಯೋಪಾಧ್ಯಾಯರು/ನಿಲಯಪಾಲಕರನ್ನು ದೂರವಾಣಿ: 08221 232054 (ಹಿ.ಪ್ರಾ.ಶಾಲೆ), 232653 (ಪ್ರೌಢಶಾಲೆ), 232332 (ಬಾಲಕರ ವಿದ್ಯಾರ್ಥಿನಿಲಯ), 232036 (ಬಾಲಕಿಯರ ವಿದ್ಯಾರ್ಥಿನಿಲಯ) ಮೂಲಕ ಸಂಪರ್ಕಿಸಿ ತಿಳಿದುಕೊಳ್ಳಬಹುದು.

## ವಿದ್ಯಾರ್ಥಿನಿಲಯ

- 40 ವಿದ್ಯಾರ್ಥಿಗಳು ಇರಬಹುದಾದ ವಿಶಾಲವಾದ ಕೊಠಡಿಗಳು.
- ಬೆಳಗಿನ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಇದ್ದು ಮಕ್ಕಳಿಗೆ ಬೇಕಾದ ಪೌಷ್ಟಿಕ ಆಹಾರವನ್ನು ನೀಡಲಾಗುವುದು.
- ಹಬ್ಬದ ದಿನಗಳಲ್ಲಿ ವಿಶೇಷ ಪ್ರಸಾದ ವ್ಯವಸ್ಥೆ.
- ಶುದ್ಧೀಕರಿಸಿದ ಕುಡಿಯುವ ನೀರಿನ ವ್ಯವಸ್ಥೆ.
- ಪುಸ್ತಕ, ಬಟ್ಟೆ ಮತ್ತು ಇತರ ವಸ್ತುಗಳನ್ನಿಟ್ಟುಕೊಳ್ಳಲು ಪ್ರತ್ಯೇಕ ಕಪಾಟುಗಳ ವ್ಯವಸ್ಥೆ.
- ಶುಚಿತ್ವಕ್ಕೆ ಹೆಚ್ಚು ಪ್ರಾಶಸ್ತ್ಯ– ಸುಸಜ್ಜಿತ ಸ್ನಾನಗೃಹ (ಸ್ನಾನಕ್ಕೆ ಬಿಸಿನೀರು) ಮತ್ತು ಶೌಚಾಲಯಗಳ ವ್ಯವಸ್ಥೆ.
- ವಿದ್ಯಾರ್ಥಿಗಳ ಕ್ಷೇಮಪಾಲನೆಗಾಗಿ ಪ್ರತಿ ಕೊಠಡಿಗೆ ಕ್ಷೇಮಪಾಲಕರ ಸೇವೆ.
- ಬೆಳಗ್ಗೆ ಹಾಗೂ ಸಂಜೆ ವೇಳೆ ಸಾಮೂಹಿಕ ಪ್ರಾರ್ಥನೆ ಮತ್ತು ವಿದ್ಯಾರ್ಥಿಗಳಿಂದ ಚಿಂತನ ಕಾರ್ಯಕ್ರಮ.

## 2018–19ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದ ವಿವರಗಳು ಸೂಚನೆಗಳು

- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10.5.2018 ನಂತರ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ.
- ಅರ್ಜಿಯಲ್ಲಿ ಪ್ರವೇಶ ಬಯಸುವ ತರಗತಿ ಮತ್ತು ಮಾಧ್ಯಮವನ್ನು ಸೂಚಿತ ಸ್ಥಳದಲ್ಲಿ ಕಡ್ಡಾಯವಾಗಿ ನಮೂದಿಸಬೇಕು.
- ಅರ್ಜಿ ಭರ್ತಿ ಮಾಡುವಾಗ ವಿಳಾಸವನ್ನು ಸಂಪೂರ್ಣವಾಗಿ ಒದಗಿಸಬೇಕು (ಮನೆ ಸಂಖ್ಯೆ, ಬೀದಿ, ಮೊಹಲ್ಲ, ಪಟ್ಟಣ/ಗ್ರಾಮ, ತಾಲ್ಲೂಕು, ಜಿಲ್ಲೆ ಇತ್ಯಾದಿ) ಹಾಗೂ ದೂರವಾಣಿ/ಮೊಬೈಲ್ ಸಂಖ್ಯೆಯನ್ನು ಒದಗಿಸಬೇಕು.
- ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಾಗ ಕೆಳಗೆ ನಮೂದಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು **ಕಡ್ಡಾಯವಾಗಿ** ಲಗತ್ತಿಸಬೇಕು. ಸಂದರ್ಶನಕ್ಕೆ ಬರುವಾಗ ಮೂಲ ಪ್ರತಿಗಳನ್ನು ಸಲ್ಲಿಸಬೇಕು.

1. ಜನ್ಮ ದಿನಾಂಕ ದೃಢೀಕರಣ ಪತ್ರ (1ನೆಯ ತರಗತಿಗೆ ಮಾತ್ರ)
2. ಹಿಂದಿನ ತರಗತಿಯ ಅಂಕಪಟ್ಟಿ
3. ಜಾತಿ ದೃಢೀಕರಣ ಪತ್ರ
4. ವಾರ್ಷಿಕ ವರಮಾನ ಪತ್ರ
5. ವೈದ್ಯಕೀಯ ಪ್ರಮಾಣ ಪತ್ರ
6. ವಿದ್ಯಾರ್ಥಿ, ತಂದೆ/ ತಾಯಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ.
7. ವಿದ್ಯಾರ್ಥಿಗೆ ಸಂಬಂಧಿಸಿದ ರಾಷ್ಟ್ರೀಕೃತ ಬ್ಯಾಂಕ್ ಖಾತೆ ಪುಸ್ತಕದ ಮೊದಲ ಪುಟದ ಜೆರಾಕ್ಸ್ ಪ್ರತಿ.
8. ಪಡಿತರ ಚೀಟಿ (ರೇಷನ್ ಕಾರ್ಡ್)
9. ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರು ಆರ್ಥಿಕವಾಗಿ ಹಿಂದುಳಿದಿರುವ ಬಗ್ಗೆ ಸ್ಥಳೀಯ ಮಠಾಧಿಪತಿಗಳು, ಧರ್ಮಗುರುಗಳು, ಜನಪ್ರತಿನಿಧಿಗಳು ಅಥವಾ ಗಣ್ಯರಿಂದ ಪಡೆದ ದೃಢೀಕರಣ ಹಾಗೂ ಶಿಫಾರಸು ಪತ್ರ.

**ಪ್ರವೇಶ ಪ್ರಕ್ರಿಯೆ ವಿವರ ಈ ಕೆಳಕಂಡಂತಿದೆ**

| ತರಗತಿ | ಪರೀಕ್ಷೆ | ಸಂದರ್ಶನ | ಫಲಿತಾಂಶ ಪ್ರಕಟ | ದಾಖಲಾತಿ |
|---|---|---|---|---|
| 1 ನೆಯ ತರಗತಿ | ಇಲ್ಲ | 18–5–2018 ಬೆಳಗ್ಗೆ 10.00 | 18–5–2018 | 18–5–2018 |
| 2 ರಿಂದ 8ನೆಯ ತರಗತಿ | 18–5–2018 ಬೆಳಗ್ಗೆ 10.00 | 19–5–2018 ಬೆಳಗ್ಗೆ 10.00 | 23–5–2018 | 28–5–2018 ರಿಂದ |

1 ರಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮಕ್ಕೆ, 1 ಮತ್ತು 5ನೇ ತರಗತಿಗಳ ಇಂಗ್ಲಿಷ್ ಮಾಧ್ಯಮಕ್ಕೆ ಹಾಗೂ 8ನೇ ತರಗತಿಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮಕ್ಕೆ ಮಾತ್ರ ಪ್ರವೇಶಾವಕಾಶವಿದೆ.

2, 3, 4, 6 ಮತ್ತು 7ನೇ ತರಗತಿಗಳಿಗೆ ಇಂಗ್ಲಿಷ್ ಮಾಧ್ಯಮ ಹಾಗೂ 9 ಮತ್ತು 10ನೇ ತರಗತಿಯ ಯಾವುದೇ ಮಾಧ್ಯಮ ತರಗತಿಗಳಿಗೆ ಪ್ರವೇಶಾವಕಾಶ ಇರುವುದಿಲ್ಲ. ಪ್ರವೇಶ ಪರೀಕ್ಷೆ ಫಲಿತಾಂಶವನ್ನು ಅಂಚೆ ಮೂಲಕ ತಿಳಿಸಲಾಗುವುದು.

**ನಿಯಮಗಳು**

- ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ವ್ಯವಸ್ಥೆ ನೀಡಲಾಗುವುದು.
- ಶಾಲಾ ಶುಲ್ಕ, ಪಠ್ಯ ಪುಸ್ತಕ, ನೋಟ್ ಪುಸ್ತಕಗಳು, ಸಮವಸ್ತ್ರ ಮತ್ತು ಇತರೆ ಅಗತ್ಯ ಸಾಮಗ್ರಿಗಳಿಗೆ ತಗಲುವ ನಿಗದಿತ ವೆಚ್ಚವನ್ನು ಪೋಷಕರೇ ಪಾವತಿಸಬೇಕು.
- ವಸತಿನಿಲಯದಲ್ಲಿ ದಾಖಲಾಗುವ ಮಕ್ಕಳನ್ನು ಪೋಷಕರು ತಿಂಗಳಿಗೊಮ್ಮೆ ಮಾತ್ರ ಭೇಟಿ ಮಾಡಲು ಅವಕಾಶವಿರುತ್ತದೆ. ಭೇಟಿಯ ಸಮಯ ಶನಿವಾರ ಮಧ್ಯಾಹ್ನ 12.00 ರಿಂದ ಸಂಜೆ 5.00 ರವರೆಗೆ ಮತ್ತು ಭಾನುವಾರ ಬೆಳಗ್ಗೆ 10.00 ರಿಂದ ಸಂಜೆ 4.30 ರವರೆಗೆ.
- ಮಕ್ಕಳನ್ನು ದೀರ್ಘಾವಧಿ ರಜೆಯಲ್ಲಿ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ (ಪೂರ್ವಾನುಮತಿಯೊಡನೆ ಮಾತ್ರ) ಊರಿಗೆ ಕಳುಹಿಸಲು ಅವಕಾಶವಿದೆ.
- ವಿದ್ಯಾರ್ಥಿಗಳನ್ನು ತಂದೆ–ತಾಯಿ ಪೋಷಕರ ಜೊತೆಗೆ ಮಾತ್ರ ಕಳುಹಿಸಿಕೊಡಲಾಗುವುದು.
- ಪೋಷಕರು ಮಕ್ಕಳನ್ನು ಶಾಲಾ ಆವರಣದ ಒಳಗೆ ಮಾತ್ರ ಭೇಟಿ ಮಾಡಬಹುದು. ಯಾವುದೇ ಸಂದರ್ಭದಲ್ಲಿಯೂ ಶಾಲಾ ಆವರಣದ ಹೊರಗೆ ಕರೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
- ಮಕ್ಕಳನ್ನು ಭೇಟಿ ಮಾಡಿದ ನಂತರ ಪೋಷಕರು ಶಾಲಾ ಆವರಣದಲ್ಲಿ ಉಳಿದುಕೊಳ್ಳಲು ಅವಕಾಶವಿರುವುದಿಲ್ಲ.
- ತಂದೆ/ತಾಯಿ/ಪೋಷಕರು ವಿದ್ಯಾರ್ಥಿಗಳಿಗೆ ಅವಶ್ಯಕತೆಗಿಂತ ಹೆಚ್ಚಿನ ಹಣವನ್ನು ನೀಡಬಾರದು.
- ಮಕ್ಕಳಿಗೆ ಅನಾರೋಗ್ಯವಾದಲ್ಲಿ ಅಥವಾ ಇತರೆ ಸಮಸ್ಯೆಗಳಿದ್ದಲ್ಲಿ ಪತ್ರದ/ದೂರವಾಣಿ ಮೂಲಕ ಮನೆಯವರಿಗೆ ತಿಳಿಸಲಾಗುವುದು.

ಈ ನಿಯಮಗಳನ್ನು ಪಾಲಿಸುವುದು ಶಾಲೆಯ ಶಿಸ್ತಿಗೆ ಬಹಳ ಅವಶ್ಯಕವಾಗಿದ್ದು ಯಾವುದೇ ಕಾರಣಕ್ಕಾಗಿ ಈ ನಿಯಮಗಳನ್ನು ಸಡಿಲಗೊಳಿಸಲಾಗುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಮೇಲ್ಕಂಡ ನಿಯಮಾವಳಿಗಳನುಳ್ಳ ಸೂಕ್ತ ಮುಚ್ಚಳಿಕೆಯನ್ನು ತಂದೆ–ತಾಯಿ/ಪೋಷಕರಿಂದ ಪಡೆಯಲಾಗುವುದು.

**ಸೂಚನೆ:** ಸುತ್ತೂರು ಶ್ರೀಕ್ಷೇತ್ರದ ಶಾಲೆಯಲ್ಲಿ ಪ್ರವೇಶಾವಕಾಶ ಸಿಗದಿದ್ದ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವು ಸ್ಥಾಪಿಸಿರುವ ಈ ಕೆಳಗಿನ ವಿದ್ಯಾರ್ಥಿನಿಲಯ/ಅನಾಥಾಲಯಗಳಲ್ಲಿ ಗಂಡುಮಕ್ಕಳ ಪ್ರವೇಶಕ್ಕೆ ಅನುಕೂಲ ಕಲ್ಪಿಸಲಾಗುವುದು.

1. ಜೆಎಸ್‌ಎಸ್ ನಿರ್ಗತಿಕ ಮಕ್ಕಳ ಕುಟೀರ, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು. (ಶ್ರೀ ಜಲೇಂದ್ರ – 9916914853)
2. ಜೆಎಸ್‌ಎಸ್ ಅನಾಥಾಲಯ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು, (ಶ್ರೀ ದಿಲೀಪ್ – 872247042)
3. ಜೆಎಸ್‌ಎಸ್ ಅನಾಥಾಲಯ, ಜೋಡಿ ರಸ್ತೆ, ಚಾಮರಾಜನಗರ (ಶ್ರೀ ಉಮೇಶ್ – 9880501947)
4. ಶ್ರೀ ಬಸವೇಶ್ವರ ಅನಾಥಾಲಯ, ಬಾಚಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು. (ಶ್ರೀ ಸಿದ್ದಲಿಂಗಪ್ಪ – 9008368456)
5. ಶ್ರೀ ಬಸವೇಶ್ವರ ಅನಾಥಾಲಯ, ಶಿವಪುರ, ಗುಂಡ್ಲುಪೇಟೆ ತಾಲ್ಲೂಕು. (ಶ್ರೀ ಪಶುಪತಿ – 9480733951)
6. ಶ್ರೀ ಬಸವೇಶ್ವರ ಅನಾಥಾಲಯ, ವಡ್ಡಗೆರೆ, ಗುಂಡ್ಲುಪೇಟೆ ತಾಲ್ಲೂಕು. (ಶ್ರೀ ಮಹಂತದೇವರು – 9901798042)
7. ಜೆಎಸ್‌ಎಸ್ ಅನಾಥಾಲಯ, ಕೆ.ಆರ್. ನಗರ, ಮೈಸೂರು (ಶ್ರೀ ಸಿದ್ದಪ್ಪ – 9901707435)
8. ಜೆಎಸ್‌ಎಸ್ ವಿದ್ಯಾರ್ಥಿನಿಲಯ, ರಾಮಾಪುರ, ಕೊಳ್ಳೇಗಾಲ ತಾಲ್ಲೂಕು.(ಶ್ರೀ ರಾಜಶೇಖರ್ – 08225–274518, 9449994081)
9. ಜೆಎಸ್‌ಎಸ್ ವಿದ್ಯಾರ್ಥಿನಿಲಯ, ದೊಡ್ಡಕಾಡನೂರು, ಹೊಳೆನರಸೀಪುರ ತಾಲ್ಲೂಕು. (ಶ್ರೀ ಪ್ರಕಾಶ – 9611248224)


**ಸಂಪರ್ಕ ವಿಳಾಸ**

**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ 571129

**ದೂರವಾಣಿ**

ಹಿರಿಯ ಪ್ರಾಥಮಿಕ ಶಾಲೆ – 08221–232054
ಪ್ರೌಢಶಾಲೆ – 08221–232653
ಬಸವೇಶ್ವರ ವಿದ್ಯಾರ್ಥಿನಿಲಯ – 08221–232332
ಅಕ್ಕಮಹಾದೇವಿ ವಿದ್ಯಾರ್ಥಿನಿಲಯ – 08221–232036


**ಪ್ರವೇಶ ಅರ್ಜಿಯು ಈ ಕೆಳಕಂಡ ವೆಬ್‌ಸೈಟ್‌ಗಳಲ್ಲಿ ದೊರೆಯುತ್ತದೆ**

www.jssonline.org
www.jsskvk.in

**ಮೈಸೂರಿನಿಂದ ಸುತ್ತೂರು ಶ್ರೀಕ್ಷೇತ್ರಕ್ಕೆ ಸರ್ಕಾರಿ ಹಾಗೂ ಖಾಸಗಿ ಬಸ್ ಸೌಲಭ್ಯವಿರುತ್ತದೆ. ಸಿಟಿ ಬಸ್ ನಂ 205, 346. RMC ಬಸ್‌ನಿಲ್ದಾಣ ಹಾಗೂ ಹಾರ್ಡಿಂಜ್ ವೃತ್ತದಿಂದ ಖಾಸಗಿ ಬಸ್‌ಗಳಿರುತ್ತವೆ.**

## ಜೆಎಸ್‌ಎಸ್ ಶಾಲೆ

**ಸುತ್ತೂರು ಶ್ರೀಕ್ಷೇತ್ರ**


ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ 571129
ಇ–ಮೇಲ್ : sutturujss@gmail.com


# ಪ್ರವೇಶ ಮಾಹಿತಿ
# 2018–19




**ಜೆಎಸ್‌ಎಸ್ ಮಹಾವಿದ್ಯಾಪೀಠ**
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570004
Website: www.jssonline.org

ಪುಟಸಂಖ್ಯೆ 4ರಲ್ಲಿರುವ ಸೂಚನೆಗಳನ್ನು ಓದಿ, ನಂತರ ಅರ್ಜಿ ಭರ್ತಿ ಮಾಡುವುದು

ಅರ್ಜಿ ಉಚಿತ

ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್ಎಸ್ ಹಿರಿಯ ಪ್ರಾಥಮಿಕಶಾಲೆ

**ಸುತ್ತೂರು ಶ್ರೀಕ್ಷೇತ್ರ – 571 129, ದೂ: 08221–232054**

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ

ಪಾಸ್‌ಪೋರ್ಟ್ ಅಳತೆಯ ಫೋಟೋ

## ಪ್ರವೇಶ ಅರ್ಜಿ: 2018–19

**ಸಂಖ್ಯೆ :** **ಪ್ರವೇಶ ಬಯಸುವ ತರಗತಿ:** ____ **ಮಾಧ್ಯಮ :** ____

| | | | |
|---|---|---|---|
| 1 | ವಿದ್ಯಾರ್ಥಿಯ ಹೆಸರು | | ಹುಡುಗ / ಹುಡುಗಿ / ರಕ್ತದ ಗುಂಪು |
| 2 | ಹುಟ್ಟಿದ ದಿನಾಂಕ | ☐☐ ☐☐ ☐☐☐☐<br>ಅಕ್ಷರಗಳಲ್ಲಿ : ................................................................. . | |
| 3 | ಹುಟ್ಟಿದ ಸ್ಥಳ | ಅ) ಗ್ರಾಮ/ಪಟ್ಟಣ/ ನಗರ :____________<br>ಆ) ತಾಲ್ಲೂಕು : ____________<br>ಇ) ಜಿಲ್ಲೆ : ____________<br>ಈ) ರಾಜ್ಯ : ____________ | |
| 4 | ಅ) ತಂದೆಯ ಹೆಸರು | | |
| | ಆ) ತಾಯಿಯ ಹೆಸರು | | |
| 5 | ತಂದೆ / ತಾಯಿ ಇದ್ದಾರೆಯೇ<br>ಹೌದು (✓) ಇಲ್ಲ (**X**) | ತಂದೆ ☐ | ತಾಯಿ ☐ |
| 6 | ಪೋಷಕರ ಹೆಸರು<br>(ತಂದೆ, ತಾಯಿ ಇಬ್ಬರೂ ಇಲ್ಲದಿದ್ದರೆ) | | ಸಂಬಂಧ ☐ |
| 7 | ತಂದೆ/ತಾಯಿ/ಪೋಷಕರ ಖಾಯಂ ಅಂಚೆ ವಿಳಾಸ | | |
| 8 | ಮೊಬೈಲ್‌ಸಂಖ್ಯೆ | ತಂದೆ:<br>ತಾಯಿ: | ಪೋಷಕರು: |
| 9 | ಆಧಾರ್ ಸಂಖ್ಯೆ<br>(ಜೆರಾಕ್ಸ್ ಪ್ರತಿ ಲಗತ್ತಿಸುವುದು) | ವಿದ್ಯಾರ್ಥಿ<br>ತಂದೆ<br>ತಾಯಿ | |

| | | |
|---|---|---|
| 10 | ಅ) ಧರ್ಮ | |
| | ಆ) ಜಾತಿ/ಉಪಜಾತಿ | |
| | ಇ) ಪಂಗಡ/ವರ್ಗ | ಪರಿಶಿಷ್ಟ ಜಾತಿ ☐ ಪರಿಶಿಷ್ಟ ವರ್ಗ ☐ ಪ್ರವರ್ಗ–1 ☐<br>ಹಿಂದುಳಿದ ವರ್ಗ ☐ ಅಲ್ಪಸಂಖ್ಯಾತ ವರ್ಗ ☐ ಇತರೆ ☐<br>(ಸಂಬಂಧಿಸಿದ ದೃಢೀಕರಣ ಪತ್ರ ಒದಗಿಸುವುದು) |

| | | | | |
|---|---|---|---|---|
| 11 | ಅ) ಮಾತೃ ಭಾಷೆ | | | |
| | ಆ) ತಿಳಿದಿರುವ ಭಾಷೆಗಳು (✓ ಗುರುತಿನಿಂದ ಸೂಚಿಸಿ) | ಓದಲು | ಬರೆಯಲು | ಮಾತನಾಡಲು |
| | 1. ಕನ್ನಡ | | | |
| | 2. ಇಂಗ್ಲಿಷ್ | | | |
| | 3. ಹಿಂದಿ | | | |
| | 4. ಇತರೆ | | | |

| | | | | |
|---|---|---|---|---|
| 12 | ಅ) ಈ ಹಿಂದೆ ವಿದ್ಯಾಭ್ಯಾಸ ಮಾಡಿ ತೇರ್ಗಡೆ ಹೊಂದಿರುವ ಶಾಲೆಯ ಹೆಸರು, ತರಗತಿ ಹಾಗೂ ವಿಳಾಸ (ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಲಗತ್ತಿಸುವುದು) | ತರಗತಿ | ಶ್ರೇಣಿ (ಗ್ರೇಡ್) | ಶಾಲೆಯ ಹೆಸರು ಹಾಗೂ ವಿಳಾಸ |
| | | | | |
| | | ಶಾಲೆ/ಮುಖ್ಯ ಶಿಕ್ಷಕರ ದೂರವಾಣಿ ಸಂಖ್ಯೆ | | |
| | ಆ)ಹಿಂದಿನ ಶಾಲೆಯ ಡೈಸ್‌ನಂಬರ್ | | | |
| | ಇ) ವಿದ್ಯಾರ್ಥಿಯ ಎಸ್.ಟಿ.ಎಸ್. (Student's Tracking System) ಸಂಖ್ಯೆ | | | |
| | ಈ) ವ್ಯಾಸಂಗ ಮಾಡಿದ ಮಾಧ್ಯಮ (✓ ಗುರುತಿನಿಂದ ಸೂಚಿಸಿ) | ಕನ್ನಡ ☐ ಇಂಗ್ಲಿಷ್ ☐<br>ಇತರೆ ....................................... | | |
| 13 | ವಿದ್ಯಾರ್ಥಿಯ ಸಹೋದರ/ಸಹೋದರಿಯರು ಈ ಸಂಸ್ಥೆಯಲ್ಲಿ ಈಗಾಗಲೇ ಶಿಕ್ಷಣ ಪಡೆಯುತ್ತಿದ್ದಾರೆಯೆ? ಅಥವಾ ಸಂಸ್ಥೆಗೆ ಸೇರಲು ಈ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದಾರೆಯೆ? ಹಾಗಿದ್ದರೆ ವಿವರಗಳು | | | |
| 14 | ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ | | | |

| | | | | | |
|---|---|---|---|---|---|
| 15 | ಕುಟುಂಬ ಸದಸ್ಯರ ಮಾಹಿತಿ | | | | |
| | ಕ್ರ.ಸಂ | ಕುಟುಂಬ ಸದಸ್ಯರು | ವಿದ್ಯಾಭ್ಯಾಸದ ವಿವರ | ಉದ್ಯೋಗ | ವಾರ್ಷಿಕ ವರಮಾನ |
| | 1 | ತಂದೆ | | | |
| | 2 | ತಾಯಿ | | | |
| | 3 | ಇತರೆ ಸದಸ್ಯರು | | | |
| | | 1. | | | |
| | | 2. | | | |
| | | 3. | | | |

| | | | |
|---|---|---|---|
| 16 | ಕುಟುಂಬಕ್ಕಿರುವ ಸೌಲಭ್ಯಗಳು | | |
| | 1 | ಜಮೀನು<br>ಅ) ಒಣ ಪ್ರದೇಶ (ಎಕರೆವಾರು)<br>ಆ) ನೀರಾವರಿ ಪ್ರದೇಶ (ಎಕರೆವಾರು) | |
| | 2 | ಮನೆ<br>( ✓ ಗುರುತಿನಿಂದ ಸೂಚಿಸಿ) | ಅ) ಸ್ವಂತ ☐ ಆ)ಭೋಗ್ಯ ☐ ಇ) ಬಾಡಿಗೆ ☐ |
| | 3 | ವಾಹನ<br>(✓ ಗುರುತಿನಿಂದ ಸೂಚಿಸಿ) | ಅ) ದ್ವಿಚಕ್ರ ವಾಹನ ☐ ಆ) ಪವರ್ ಟಿಲ್ಲರ್ ☐<br>ಇ) ಟ್ರ್ಯಾಕ್ಟರ್ ☐ ಈ) ಕಾರು ☐ |
| | 4 | ಎಲೆಕ್ಟ್ರಾನಿಕ್ ಉಪಕರಣಗಳು<br>(✓ ಗುರುತಿನಿಂದ ಸೂಚಿಸಿ) | ಅ) ಟಿ.ವಿ. ☐ ಆ) ರೆಫ್ರಿಜರೇಟರ್ ☐ ಇ) ವಾಷಿಂಗ್ ಮಷಿನ್ ☐ |

| | | | |
|---|---|---|---|
| 17 | ವಿದ್ಯಾರ್ಥಿಯ ಬ್ಯಾಂಕ್ ಖಾತೆ ಸಂಖ್ಯೆಯನ್ನು (ರಾಷ್ಟ್ರೀಕೃತ) ಕಡ್ಡಾಯವಾಗಿ ನಮೂದಿಸುವುದು ಹಾಗೂ ಪಾಸ್‌ಬುಕ್‌ನ ಮೊದಲ ಪುಟದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು<br>**1.** 1 ರಿಂದ 4ನೇ ತರಗತಿಯ ವಿದ್ಯಾರ್ಥಿ ಮತ್ತು ತಂದೆ/ತಾಯಿ/ಪೋಷಕರ ಜಂಟಿ ಖಾತೆ<br>**2.** 5 ರಿಂದ 7ನೇ ತರಗತಿಯ ವಿದ್ಯಾರ್ಥಿಯ ವೈಯಕ್ತಿಕ ಬ್ಯಾಂಕ್‌ಖಾತೆ | ಖಾತೆ ಸಂಖ್ಯೆ<br>ಬ್ಯಾಂಕ್‌ನ ಹೆಸರು<br>ಶಾಖೆ | |
| 18 | ಶಿಫಾರಸ್ಸು ಮಾಡಿದವರ ಪೂರ್ಣ ವಿಳಾಸ ಮತ್ತು ದೂರವಾಣಿ, ಫ್ಯಾಕ್ಸ್ ಸಂಖ್ಯೆ, ಇ–ಮೇಲ್ ವಿಳಾಸ (ಮಠಾಧಿಪತಿಗಳು, ಗಣ್ಯವ್ಯಕ್ತಿಗಳು ಅಥವಾ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು) | | |
| 19 | ಇತರೆ ವಿವರಗಳು (ಇದ್ದಲ್ಲಿ) | | |

## ದೃಢೀಕರಣ

ಅರ್ಜಿದಾರ ವಿದ್ಯಾರ್ಥಿಗೆ ______________ ಮಾಧ್ಯಮದ ________ ತರಗತಿಗೆ ಪ್ರವೇಶ ನೀಡಬೇಕೆಂದು ಕೋರುತ್ತೇವೆ. ಅರ್ಜಿಯಲ್ಲಿ ತಿಳಿಸಿರುವ ವಿವರಗಳು ಸರಿಯಾಗಿರುತ್ತವೆ ಎಂದು ದೃಢೀಕರಿಸುತ್ತೇವೆ.

ಶಿಫಾರಸುದಾರರ ಸಹಿ ವಿದ್ಯಾರ್ಥಿಯ ಸಹಿ ತಂದೆ/ತಾಯಿ ಅಥವಾ ಪೋಷಕರ ಸಹಿ

ಸ್ಥಳ : ಸ್ಥಳ :

ದಿನಾಂಕ : ದಿನಾಂಕ :

## ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲಾ ಕಛೇರಿಯ ಉಪಯೋಗಕ್ಕೆ ಮಾತ್ರ

ಕುಮಾರ/ಕುಮಾರಿ ____________________________________ ಎಂಬ ವಿದ್ಯಾರ್ಥಿಯನ್ನು _______________ ಮಾಧ್ಯಮದ _____________ ತರಗತಿಗೆ ದಾಖಲು ಮಾಡಿಕೊಳ್ಳಲಾಗಿದೆ.

ದಾಖಲಾತಿ ಸಂಖ್ಯೆ ಮತ್ತು ದಿನಾಂಕ:

ವರ್ಗಾವಣೆ ಪತ್ರದ ಸಂಖ್ಯೆ ಮತ್ತು ದಿನಾಂಕ ಮುಖ್ಯೋಪಾಧ್ಯಾಯರ ಸಹಿ

## ಸೂಚನೆಗಳು

1. ಅರ್ಜಿಯಲ್ಲಿರುವ ಎಲ್ಲಾ ಕಾಲಂಗಳನ್ನು ಓದಿ ಸ್ಪಷ್ಟವಾಗಿ ಭರ್ತಿ ಮಾಡುವುದು.
2. ಅರ್ಜಿಯೊಂದಿಗೆ ನೀಡಿರುವ ಶಾಲೆಯ ಪ್ರವೇಶ ಮಾಹಿತಿ ಪತ್ರವನ್ನು ಓದಿದ ನಂತರ ಅರ್ಜಿ ಭರ್ತಿ ಮಾಡುವುದು. ಅಂಚೆ ಮೂಲಕ ಅರ್ಜಿ ಸಲ್ಲಿಸುವವರಿಗೆ ಲಿಖಿತ ಪರೀಕ್ಷೆ ಪ್ರವೇಶ ಪತ್ರವನ್ನು ರವಾನಿಸಲಾಗುವುದಿಲ್ಲ. ಅವರಿಗೆ ಪರೀಕ್ಷೆಯ ದಿನ ಒಂದು ಗಂಟೆ ಮೊದಲು ಪರೀಕ್ಷೆ ಪ್ರವೇಶ ಪತ್ರ ವಿತರಿಸಲಾಗುವುದು.
3. ಪೋಷಕರ ಹೆಸರು, ವಿದ್ಯಾಭ್ಯಾಸ, ಉದ್ಯೋಗ, ವಾರ್ಷಿಕ ಆದಾಯ ವಿವರಗಳನ್ನು ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ ಒದಗಿಸುವುದು.
4. ಜಾತಿ/ಆದಾಯ ಪ್ರಮಾಣಪತ್ರ, ಆಧಾರ್‌ಕಾರ್ಡ್, ಬ್ಯಾಂಕ್‌ಖಾತೆಯ ಪಾಸ್‌ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.
5. ಅರ್ಜಿಯಲ್ಲಿ ನೀಡಿರುವ ಮಾಹಿತಿಗಳು ತಪ್ಪಾಗಿರುವುದು ತಿಳಿದು ಬಂದಲ್ಲಿ ಅಥವಾ ಅಪೂರ್ಣವಾಗಿದ್ದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

## ಪ್ರವೇಶ ಪ್ರಕ್ರಿಯೆ ವಿವರ

| ತರಗತಿ | ಪರೀಕ್ಷೆ | ಸಂದರ್ಶನ | ಫಲಿತಾಂಶ ಪ್ರಕಟ | ದಾಖಲಾತಿ |
|---|---|---|---|---|
| 1 ನೇ ತರಗತಿ | ಇಲ್ಲ | 18–5–2018 ಬೆಳಗ್ಗೆ 10.00 | 18–5–2018 | 18–5–2018 |
| 2 ರಿಂದ 7 ನೇ ತರಗತಿ | 18–5–2018 ಬೆಳಗ್ಗೆ 10.00 | 19–5–2018 ಬೆಳಗ್ಗೆ 10.00 | 23–5–2018 | 28–5–2018 ರಿಂದ |